ಶ್ರೀ ಎ.ಲಕ್ಷ್ಮೀಸಾಗರ್.—ಸನ್ಮಾನ್ಯ ಸದಸ್ಯರ ಅನುಗ್ರಹ ಕೃಪಕಟಾಕ್ಷದಿಂದವಲ್ಲಾಸರಿಹೋಗುತ್ತದೆ ಎಂದು ನಾನು ಭಾವಿಸುತ್ತೇನೆ. ಜಿಲ್ಲಾ ಅಭಿವೃದ್ಧಿ ಮಂಡಳಿಯ ಸಭೆ ನಡೆಯುತ್ತದೆ. ಆ ಸಭೆಗೆ ಸನ್ಮಾನ್ಯ ಸದಸ್ಯರೂ ಗೌರವಾನ್ವಿತ ಆಹ್ವಾನಿತರು, ಜಿಲ್ಲೆಗೆ ಮತ್ತು ಹಳ್ಳಿಗಳಿಗೆ ಸಂಬಂಧಪಟ್ಟ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳು ಹೇಗೆ ನಡೆಯಬೇಕು? ಎಲ್ಲಿ ನಡೆಯಬೇಕು? ಎಂಬ ಪೂರ್ಣ ವಿವರಗಳ ಬಗ್ಗೆ ಚರ್ಚೆ ನಡೆಯತಕ್ಕಂತಹ ಜಾಗ ಅದು ಇದೆ. ಅಲ್ಲಿ ತಮ್ಮ ಅಹವಾಲನ್ನು ಸಲ್ಲಿಸಬೇಕೆಂಬ ತಮ್ಮ ಮೂಲಕ ಅವರಿಗೆ ವಿನವರಿಕೆ ಮಾಡುತ್ತಿದ್ದೇನೆ.

೩-೦೦ ಪಿ.ಎಂ.

ಶ್ರೀ ಅಬ್ದುಲ್ ನಜೀರ್ ಸಾಬ್.—ಈ ಸಾರಿ ಆಕ್ಷನ್‌ನಲ್ಲಿ ಆ ರಸ್ತೆ ಹಾಗೂ ಸೇತುವೆ ಎರಡನ್ನೂ ಸೇರಿಸಿ ಆದಕ್ಕೆ ತಮ್ಮ ಅನುಮತಿಯನ್ನೂ ಕೂಡ ಕೊಟ್ಟು ನನಗೆ ಕಳುಹಿಸಿಕೊಡಿ, ಅದನ್ನು ಮಾಡಿಸಿ ಕೊಡುತ್ತೇನೆ.

ಶ್ರೀ ವಸಂತ ಬಂಗೇರ.—ಅದನ್ನು ಈಗಾಗಲೇ ಸೇರಿಸಿಯಾಗಿದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಸೇರಿಸಿದ ಮೇಲೂ ಆಕ್ಷನ್ ಸಮಿತಿಯ ಮುಂದೆ ಅದು ಬಂದ ಆದಕ್ಕೆ ನೀವು ಅನುಮತಿಯನ್ನು ಕೊಡಬೇಕಾಗಿತ್ತದೆ. ನಂತರ ನಾವು ಅದಕ್ಕೆ ಒಪ್ಪಿಗೆಯನ್ನು ಕೊಡುತ್ತೇವೆ.

XIII. ಹೊಸ ನಗರ ತಾಲ್ಲೂಕು ರಿಪ್ಪನ್ ಪೇಟೆಯಲ್ಲಿ ಲಾರಿ ಡಿಕ್ಕಿ ಹೊಡೆದು ಪುಟ್ಟಸ್ವಾಮಿ ಎಂಬುವರು ಮೃತಪಟ್ಟಿರುವುದು

ಶ್ರೀ ಬಿ. ಸ್ವಾಮಿ ರಾವ್.—ಹೊಸನಗರ ತಾಲ್ಲೂಕು ರಿಪ್ಪನ್‌ಪೇಟೆಯಲ್ಲಿ ದಿನಾಂಕ ೩-೨-೯೬ ರಂದು ರಾತ್ರಿ ೯-೩೦ರ ಸಮಯದಲ್ಲಿ ಎಂವೈಎಸ್ ೪೦೫೬ ಸಂಖ್ಯೆಯ ಹುಲ್ಲು ತುಂಬಿದ ಲಾರಿಯೊಂದು ಗುತ್ತಿಗೆದಾರರಾದ ಪುಟ್ಟಸ್ವಾಮಿ ಎಂಬುವರಿಗೆ ಡಿಕ್ಕಿ ಹೊಡೆದು ಸ್ವಲ್ಪ ಸಮಯದ ನಂತರ ಸದರಿಯವರು ಸಾವನ್ನಪ್ಪಿದರು. ಹತ್ತಿರದಲ್ಲಿರುವ ಆರಕ್ಷಕ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ರವರು ತಕ್ಷಣ ಲಾರಿಯನ್ನು ನಿಲ್ಲಿಸಿ ವಶಕ್ಕೆ ತೆಗೆದುಕೊಳ್ಳದೆ ಅದಕ್ಕಿಂತ ಹೆಚ್ಚಾಗಿ ಗಾಯಾಳು ಪುಟ್ಟಸ್ವಾಮಿ ಮಾತನಾಡುವ ಸ್ಥಿತಿಯಲ್ಲಿದ್ದರೂ ತುರ್ತು ಚಿಕಿತ್ಸೆ ನೀಡಲು ಕ್ರಮ ತೆಗೆದುಕೊಳ್ಳದೆ ಅಂತಿಮ ಹೇಳಿಕೆಯನ್ನೂ ಪಡೆಯದೆ ಲಾರಿಯ ಮಾಲೀಕರೊಂದಿಗೆ ಶಾಮೀಲಾಗಿ ಲಾರಿಯನ್ನು ಬಿಡುಗಡೆ ಮಾಡಿರುತ್ತಾರೆ. ಸದರಿ ಸಬ್ ಇನ್ಸ್‌ಪೆಕ್ಟರ್ ರವರು ರಿಪ್ಪನ್ ಪೇಟೆಯ ಅಧಿಕೃತ ನಿವಾಸದಲ್ಲಿ ವಾಸವಾಗಿರದೆ, ಹತ್ತಿರದ ಅವರ ಊರಾದ ಗವಟೂರಿನಲ್ಲಿ ವಾಸವಾಗಿದ್ದು ವ್ಯವಸಾಯ ಹಾಗೂ ರಾಜಕೀಯದಲ್ಲಿ ನಿರತರಾಗಿರುತ್ತಾರೆ. ಸಾರ್ವಜನಿಕರಿಗೆ ರಕ್ಷಣೆ ಕೊಡುವುದರಲ್ಲಿ ಇವರು ವಿಫಲರಾಗಿದ್ದಾರೆ. ಅಷ್ಟೇ ಅಲ್ಲದೆ ಸದರಿ ಆರಕ್ಷಕ ಠಾಣೆಯಲ್ಲಿ ಕೆಲಸ ಮಾಡುತ್ತಿರುವ ಪೋಲೀಸರಿಗೆ ಪುಂಡರು ಹೊಡೆದು ಹಿಂಸೆ ಕೊಟ್ಟಾಗಲೂ ಪೊಲೀಸರಿಗೆ ರಕ್ಷಣೆ ಕೊಡದ ಆರಕ್ಷಕ ಠಾಣೆಯು ವ್ಯಾಪ್ತಿಯಲ್ಲಿ ನಾಗರೀಕರು ಇವರ ಕೈಕೆಳಗೆ ಕೆಲಸ ಮಾಡುವ ಸಿಬ್ಬಂದಿಯವರು, ಇಲಾಖೆಯ ನೌಕರರು, ಮುಂತಾದವರಿಗೆ ರಕ್ಷಣೆ ಇಲ್ಲದೆ ಶಾಂತಿಭಂಗವಾಗಿದೆ. ಮೇಲ್ಕಂಡ ಪ್ರಕರಣಗಳಿಗೆ ಕಾರಣಕರ್ತರಾದ ಅಧಿಕಾರಿಯನ್ನು ಅಮಾನತ್ತಿನಲ್ಲಿಟ್ಟು ವಿಚಾರಣೆಗೆ ಒಳಪಡಿಸುವಂತೆ ನಾನು ಆಗ್ರಹಪಡಿಸುತ್ತೇನೆ.

ಶ್ರೀ ಬಿ. ರಾಚಯ್ಯ.—ಇದರ ಬಗ್ಗೆ ವಿಚಾರಣೆಯನ್ನು ಮಾಡಿಸುತ್ತೇನೆ. ಆ ಒಂದು ವಿಚಾರಣೆಯಿಂದ ಬಂದಂತಹ ಅಭಿಪ್ರಾಯವನ್ನು ಸದನದ ಮುಂದಿಡುತ್ತೇನೆ.

XIV. ಮುಧೋಳ್ ತಾಲ್ಲೂಕಿನ ಮಹಾಲಿಂಗಪುರ ಪೋಲೀಸ್ ಠಾಣೆಯಲ್ಲಿ ಮೂಡಲಗಿ ಗ್ರಾಮದ ಶಿವಲಿಂಗಪ್ಪ ಶಿರೋಳಿ ಇವರನ್ನು ಹೊಡೆದಿರುವುದು.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಮುಧೋಳ್ ತಾಲ್ಲೂಕಿನ ಮಹಾಲಿಂಗಪುರ ಪೋಲೀಸ್ ಠಾಣೆಯಲ್ಲಿ ಮೂಡಲಗಿ ಗ್ರಾಮದ ಉಪಹಾರ ಆಂಗಡಿಯ ಶ್ರೀ ಶಿವಲಿಂಗಪ್ಪ ಶಿರೋಳಿ ಇವರನ್ನು ಮಹಾಲಿಂಗಪುರ ಪೋಲೀಸ್ ಠಾಣೆಯ ಹೆಡ್ ಕಾನ್‌ಸ್ಟೇಬಲ್ ಆರ್. ಜಿ. ಚವಾಣರು ಬಹಳಷ್ಟು ಬಡಿದು ಶಿರೋಳಿ ಇವರನ್ನು ಪ್ರಜ್ಞಾಹೀನರಾಗುವಂತೆ ಮಾಡಿದ ಘಟನೆ ನಡೆದಿರುತ್ತದೆ.